**ಪಾಠ–9** **ನವೆಂಬರ್ 21–27**

# ಸಭೆ ಮತ್ತು ಶಿಕ್ಷಣ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಲೂಕ 10:30–37; ಮತ್ತಾಯ 5:14–16; ಲೂಕ 4:18–23; ಯೆರೆ 29:13; ಮತ್ತಾಯ 7:7; 1 ಥೆಸ 2:6–8.

**ಸ್ಮರಣವಾಕ್ಯ : "ಇದಲ್ಲದೆ ನಾವು ಕ್ರಿಸ್ತನ ಅಪೋಸ್ತಲರಾಗಿರುವುದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ. ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು. ನೀವು ನಮಗೆ ಅತಿಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವುದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವುದಕ್ಕೆ ಸಂತೋಷಿಸುವವರಾದೆವು 1 ಥೆಸ 2:6–8.**

ಅನಾದಿಕಾಲದಿಂದಲೂ ದೇವರ ವಿಶ್ವಾಸಿಗಳು– ಸಭಾಮಂದಿರಗಳಲ್ಲಿ, ಮನೆಗಳಲ್ಲಿ ಮತ್ತು ದೇವಾಲಯಗಳಲ್ಲಿ ದೇವಾರಾಧನೆಗೆ ಕೂಡುತ್ತಿದ್ದರು. ಸತ್ಯವೇದ ಅಧ್ಯಯನದಿಂದಲೂ ಮತ್ತು ದೇವಾರಾಧನೆಯಿಂದಲೂ, ದೇವರನ್ನು ಅರಿಯುವುದಕ್ಕೂ ಮತ್ತು ಅವರ ಜೀವನಕ್ಕೆ ಆತನ ಚಿತ್ತವೇನಾಗಿದೆ ಎಂಬುದನ್ನು ಅರಿಯುವುದಕ್ಕೂ ಜನ ಹಾತೊರೆಯುತ್ತಿದ್ದಾರೆಂದು ಸತ್ಯವೇದ ಪ್ರಕಟಿಸಿದೆ.

---

* **ನವೆಂಬರ್ 28ರ ಸಬ್ಬತ್ ಶಾಲೆಯ ಪಾಠಕ್ಕೆ ಸಿದ್ಧರಾಗಲು ಓದಿಕೊಳ್ಳಿರಿ.**

ಆಲಯದಲ್ಲಿ ತಾನೇ ಗಂಭೀರವಾದ ಪ್ರಕಟಿಸುತ್ತದೆ. ದೇವರ ಜ್ಞಾನದಲ್ಲಿ ಜನರು ಬೆಳೆಯುವುದಕ್ಕೆ ಮತ್ತು ಅವರ ಜೀವನಕ್ಕೆ, ಆತನ ಚಿತ್ತವೇನಾಗಿದೆಯೆಂಬುದನ್ನು ಅರಿಯುವುದಕ್ಕೂ ಸೂಕ್ತವಾದ ಸ್ಥಳ: ದೇವರಾಲಯವೆಂದು ಸತ್ಯವೇದ ಮತ್ತೆ ಮತ್ತೆ ಜ್ಞಾಪಿಸುತ್ತಿದೆ.

ಕೆಲವೊಮ್ಮೆ ನಾವು ಪ್ರಶ್ನೆಗಳನ್ನು ಕೇಳಲು ಹೆದರುತ್ತೇವೆ. ಸತ್ಯವೇದದಲ್ಲಿ ಪ್ರಶ್ನೆಗಳು, ದೇವರನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಹಾಯ ಮಾಡಿವೆ. ಇದೇ ರೀತಿಯಲ್ಲಿ, ಸತ್ಯವೇದದುದ್ದಕ್ಕೂ ಕಥೆಗಳನ್ನು ಬಳಸಲಾಗಿದೆ. ಆ ಮೂಲಕ ಜನರು ದೇವರಿಗೆ ತಮ್ಮನ್ನು ಒಪ್ಪಿಸಿಕೊಡುವುದಕ್ಕೆ ಆಲೋಚನೆ ಮಾಡಲು ಸದಾವಕಾಶಗಳನ್ನು ಹುಟ್ಟುಹಾಕಿಕೊಡಲಾಗಿದೆ. ತಮ್ಮ ಶಿಷ್ಯರು ಮತ್ತು ಹಿಂಬಾಲಕರುಗಳಿಗೆ ಯೇಸುಕ್ರಿಸ್ತನು ಇಂತಹ ವಿಶಿಷ್ಟ ಶಿಕ್ಷಣವನ್ನೇ ಆಶಿಸಿದ್ದನು.

ಸಭೆಯೇ ಶಿಕ್ಷಣದ ತಾಣವಾದರೆ, ಅದು ನಿಷ್ಕಪಟ ಚರ್ಚೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮಗೆ ಶಾಲೆಗಳಲ್ಲಿ ಆಗಾಗ್ಗೆ ಹೇಳಿಕೊಟ್ಟ ಹಾಗೆ– "ಯಾವುದೇ ಮೂಕ ಪ್ರಶ್ನೆಗಳು" ಎಂಬ ಮಾತೇ ಇಲ್ಲ. ಪ್ರತಿ ವ್ಯಕ್ತಿಯು ದೇವರ ಕೃಪೆಯಲ್ಲಿ ಬೆಳೆಯಲೂ, ದೇವರನ್ನು ಮತ್ತು ಅವರ ಜೀವನಕ್ಕೆ ಆತನ ಚಿತ್ರವೇನೆಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೂ ಒಂದು ಕ್ಷೇಮಕರವಾದ ವಾತಾವರಣವನ್ನು ಸಭೆ ಒದಗಿಸಿಕೊಡಬೇಕು.

**ಭಾನುವಾರ** **ನವೆಂಬರ್ 22**

## ನಿಜವಾದ ಕ್ರೈಸ್ತೀಯ ಶಿಕ್ಷಣ

ಒಬ್ಬ ರಬ್ಬಿಯ ಬಗ್ಗೆ ಒಂದು ಕಥೆ ಇದೆ. ಅವನ ತರಗತಿಯಲ್ಲಿ ಒಬ್ಬ ನಿದ್ದೆಗಣ್ಣಿನ ವಿದ್ಯಾರ್ಥಿ ಕುಳಿತಿದ್ದ. ಅವನ ಕಡೆ ನೋಡುತ್ತಾ ರಬ್ಬಿ, ವಿದ್ಯಾರ್ಥಿಗಳನ್ನುದ್ದೇಶಿಸಿ: ವಿದ್ಯಾರ್ಥಿಗಳೇ, ಯಾವಾಗ ರಾತ್ರಿ ಕಳೆಯಿತು ಮತ್ತು ಬೆಳಗ್ಗೆ ಆರಂಭವಾಯಿತು ಎಂದು ಒಬ್ಬನು ತಿಳಿದುಕೊಳ್ಳುವುದು ಹೇಗೆ?

ಅನೇಕ ವಿದ್ಯಾರ್ಥಿಗಳು ಉತ್ತರಿಸುವುದಕ್ಕಾಗಿ ಕೈ ಎತ್ತಿದ್ದರು. "ರಬ್ಬಿ, ಒಂದು ಆಡಿಗೂ ಮತ್ತು ಒಂದು ಕುರಿಗೂ ಇರುವ ವ್ಯತ್ಯಾಸವೇನೆಂದು ಗೊತ್ತಾದಾಗ" ಎಂದು ಒಬ್ಬ ಹೇಳಿದ. ರಬ್ಬಿ, "ಇಲ್ಲ" ಎಂದು ಹೇಳಿದನು. "ಒಂದು ಅಂಜೂರದ ಮರಕ್ಕೂ ಮತ್ತು ಒಂದು ಆಲೀವ್ ಮರಕ್ಕೂ ನಡುವಿರುವ ವ್ಯತ್ಯಾಸವೇನೆಂದು ಗೊತ್ತಾದಾಗ" ಎಂದು ಇನ್ನೊಬ್ಬ ವಿದ್ಯಾರ್ಥಿ ಹೇಳಿದಾಗ ರಬ್ಬಿ ಅದಕ್ಕೂ "ಇಲ್ಲ" ಎಂದನು.

ಇಂತಾ ಸುಮಾರು ಉತ್ತರಗಳು ಬಂದ ನಂತರ, ರಬ್ಬಿ, ಈ ರೀತಿಯಾಗಿ ಘೋಷಣೆ ಮಾಡಿದ್ದನು: ವಿದ್ಯಾರ್ಥಿಗಳೇ ಒಬ್ಬನು ರಾತ್ರಿ ಮುಗಿಯಿತು ಮತ್ತು ಹಗಲು ಆರಂಭವಾಯಿತು ಎಂದು ತಿಳಿಯುವುದು, ನೀವು ಎಂದೂ ನೋಡದ ಒಬ್ಬನನ್ನು ಗುರುತಿಸಿ, ಆ ಅಪರಿಚಿತನನ್ನು ಸಹೋದರನೆಂದೂ, ಎಂದೂ ನೋಡದ ಒಬ್ಬಳನ್ನು ಸಹೋದರಿ ಎಂದು ಹೇಳಿದಾಗ, ಆ ಕ್ಷಣ, ಅವನಿಗೆ ರಾತ್ರಿ ಮುಗಿದು, ಹಗಲು ಆರಂಭವಾಗುವುದು. ಅಂತಹ ಒಂದು ಕ್ಷಣ ಬಾರದಿದ್ದರೆ, ಆ ದಿನ ಎಷ್ಟೇ ಪ್ರಕಾಶಮಾನವಾಗಿರಲಿ, ಅದು ಅವನಿಗೆ ರಾತ್ರಿಯೇ ಆಗಿರುತ್ತದೆ."

ಲೂಕ 10:30–37ನ್ನು ಓದಿಕೊಳ್ಳಿರಿ. ಈ ಕಥೆಯ ಮುಖಾಂತರ ಯೇಸುಕ್ರಿಸ್ತನು ನಮಗೆ ಬೋಧಿಸುವುದೇನು? ಯಾವುದೇ ನಿಜವಾದ ಕ್ರೈಸ್ತೀಯ ಶಿಕ್ಷಣದ ಭಾಗ ಏನಾಗಿರಬೇಕು ಎಂಬುದಕ್ಕೆ ಈ ಕಥೆ ನಮಗೆ ತಿಳಿಸಿಕೊಡುವುದೇನು?

ಸೆವೆಂತ್–ಡೇ ಅಡ್ವೆಂಟಿಸ್ಟ್‌ರಾದ ನಾವು ಸಮೃದ್ಧಿಯಾದ ತಾತ್ವಿಕ ಬೆಳಕೂ ಮತ್ತು ಸತ್ಯಗಳಿಂದ ಆಶೀರ್ವದಿಸಲ್ಪಟ್ಟಿದ್ದೇವೆ (ಉದಾ: ಸತ್ತವರ ಸ್ಥಿತಿ, ಸಬ್ಬತ್ತು, 1844 ಮತ್ತು ನ್ಯಾಯವಿಚಾರಣೆ, ಮಹಾಹೋರಾಟ ಇತ್ಯಾದಿ) ಕ್ರೈಸ್ತೀಯ ಪ್ರಪಂಚದಲ್ಲಿ ಅನೇಕ ಕ್ರೈಸ್ತರಿಗೆ ಇವು ಅರ್ಥವಾಗಿಲ್ಲ. ಈ ಸತ್ಯಗಳು ಅದೆಷ್ಟೇ ನಿರ್ಣಾಯಕವಾಗಿರಲಿ. ಬೇರೆಯವರ ವಿಷಯದಲ್ಲಿ ಪೂರ್ವಾಗ್ರಹಪೀಡಿತರಾಗಿ ನಡೆದುಕೊಂಡರೆ, ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಒಲವುಗಳು ಬೇರೆಯವರನ್ನು ಕೀಳಾಗಿ ಕಾಣುವಂತೆ ಮಾಡಿದರೆ ನಾವು ತಿಳಿದುಕೊಂಡ ಈ ಸತ್ಯಗಳು ನಮಗೆ ಒಳ್ಳೆಯದು ಮಾಡುವುದಾದರೂ ಹೇಗೆ?

ನಿಜವಾದ ಕ್ರೈಸ್ತೀಯ ಶಿಕ್ಷಣ, ಮಾನವನ ನ್ಯೂನತೆಗಳು ಮತ್ತು ದುಶ್ಪತ್ವಗಳ ಸ್ವಭಾವದಿಂದ ನಮ್ಮನ್ನು ಮೇಲೆತ್ತಿ ಬೇರೆಯವರನ್ನು ಕ್ರಿಸ್ತನು ಹೇಗೆ ಕಾಣುವನೋ ಹಾಗೆ ಕಾಣುವುದಕ್ಕೆ ಸಹಾಯ ಮಾಡಬೇಕು. ಯಾಕೆಂದರೆ ಅವರಿಗಾಗಿ ಕ್ರಿಸ್ತನು ತನ್ನ ಪ್ರಾಣವನ್ನೇ ತ್ಯಾಗಮಾಡಿದನು; ಅವರ ಪಾಪಗಳ ನಿಮಿತ್ತ ಶಿಲುಬೆಯನ್ನು ಹೊತ್ತುಕೊಂಡು ಹೋದನು, ಅವರಿಗಾಗಿ ಯಾರಿಂದಲೂ ಸಂದಾಯ ಮಾಡಲಿಕ್ಕಾಗದಷ್ಟು ದೊಡ್ಡ ಮೊತ್ತವನ್ನು ಭರಿಸಿದ್ದನು. ನಾವು ಶಿಲುಬೆಯನ್ನು ಮೇಲೆ ಎತ್ತಿ ಹಿಡಿದಾಗ, ನಾವು ಪ್ರತಿಯೊಬ್ಬ ಮಾನವನ ಮೌಲ್ಯ ಮತ್ತು ಅರ್ಹತೆಯೇನು ಎಂಬುದನ್ನು ಅರಿಯುವೆವು. ಹಾಗೆ ಅರಿತುಕೊಂಡ ನಂತರ ಅವರನ್ನು ಎಷ್ಟು ಗೌರವದಿಂದ ಕಾಣಬಹುದೋ ಅಷ್ಟೇ ಗೌರವದಿಂದ ಕಾಣೋಣ. ದೇವರು ಅವರಿಗೆ ಕೊಟ್ಟಿರುವ ಮೌಲ್ಯಕ್ಕೆ ಮನ್ನಣೆ ಕೊಡೋಣ. ಕ್ರೈಸ್ತೀಯ ಶಿಕ್ಷಣ ಈ ಬೋಧನೆಯನ್ನು ಒಳಗೊಂಡಿರಬೇಕು. ಇಲ್ಲದಿದ್ದರೆ "ಕ್ರೈಸ್ತೀಯ" ಹೆಸರನ್ನು ಬರೆದುಕೊಳ್ಳುವ ಯೋಗ್ಯತೆ ಅದಕ್ಕಿರುವುದಿಲ್ಲ.

**ಬಹಳ ತಂತ್ರಗಾರಿಕೆಯಿಂದ ಅಥವಾ ತೆರೆದ ಮನಸ್ಸಿನಿಂದ,ಒಬ್ಬ ಕ್ರೈಸ್ತನಾದ ನೀನು ಎಲ್ಲರಿಗಿಂತ ಎತ್ತರವಾಗಿ ಎದ್ದು ನಿಲ್ಲಬೇಕೆಂದು, ನಿಮ್ಮ ಯಾವ ಸಾಂಸ್ಕೃತಿಕ ಮತ್ತು ಸಾಮಾಜಿಕ ಪೂರ್ವಕಲ್ಪಿತ ಅಭಿಪ್ರಾಯಗಳು ಬೋಧಿಸುವವು?**

---

---

**ಸೋಮವಾರ** **ನವೆಂಬರ್ 23**

## ಬೆಳಕಿನಂತೆ ಬಾಳಲು ಕಥೆ

ಎಲ್ಲ ಕಡೆಯಿಂದ ನಾವು ನೋಡುವಾಗ, ನಮ್ಮ ಗ್ರಹವು ತನ್ನಷ್ಟಕ್ಕೆ ತಾನೇ ತಿರುಗುತ್ತಿದೆ. ತಿರುಗುತ್ತಾ ತಿರುಗುತ್ತಾ ಕತ್ತಲೆಯನ್ನು ಬಿಟ್ಟುಕೊಟ್ಟು, ಬೆಳಕನ್ನು ಆಹ್ವಾನಿಸುತ್ತಿದೆ. ಕತ್ತಲೆಗೆ ಬೆಳಕನ್ನು ಬದಲಾಯಿಸುಕೊಳ್ಳುತ್ತಿದ್ದಾರೆ. ನಾವು ಸಹ ಕತ್ತಲೆಯನ್ನು ಎದುರಿಸುತ್ತಿದ್ದೇವೆ. ನಮ್ಮ ದುರ್ಗಮವಾದ ಹಾಗು ಸವಾಲೊಡ್ಡುವ ಪ್ರಪಂಚದಲ್ಲಿ ಎದುರಾಗುವ ಸಮಸ್ಯೆಗಳ ಸುಳುವಿನ ಅನುಭವ ಹೇಗಿದೆಯೆಂದರೆ, ಕತ್ತಲೆ ಬಾಗಿಲ ಹೊಸ್ತಿಲಲ್ಲಿ ಬಂದು ನಿಂತಿರುವಂತಿದೆ. ವ್ಯಾಧಿಯೊಂದಿಗೆ ನರಳುತ್ತಿರುವಾಗ, ಪ್ರೀತಿಪಾತ್ರರು ಮರಣಿಸಿದಾಗ, ಕುಟುಂಬಗಳು ಒಡೆದು

ಹೋಗುತ್ತಿರುವುದನ್ನೂ ಮತ್ತು ವಿಚ್ಛೇದನಗೊಳ್ಳುತ್ತಿರುವುದನ್ನು ನೋಡಿದಾಗ, ನಮ್ಮ ಸಮಾಜದಲ್ಲಿಯೂ ಮತ್ತು ನಮ್ಮ ಸಂಸ್ಕೃತಿಯಲ್ಲಿಯೂ ದುಷ್ಟತನ ಕಂಡು ಅದನ್ನು ತಿದ್ದಲು ಹೋದಾಗ ಜೀವನದ ಭಯಾನಕ ಸ್ವರೂಪಗಳು ಅರ್ಥವಾಗ ತೊಡಗುತ್ತವೆ.

ನಮ್ಮ ಜೀವನದೊಳಗೂ ಮತ್ತು ಹೊರಗೂ ನೈತಿಕತೆಯು ದಿವಾಳಿತನವಾಗುತ್ತಿರುವ ಮತ್ತು ಆಧ್ಯಾತ್ಮಿಕತೆಗೆ ಅಂಧಕಾರ ಮುಸುಕುತ್ತಿರುವುದರ ಕುರಿತು ದೊಡ್ಡದನಿಯ ಕೂಗು ಎದ್ದಿರುವುದರ ಮಧ್ಯದಲ್ಲೇ, ಸಣ್ಣ ಧ್ವನಿಯಲ್ಲಿ ಯೇಸುಕ್ರಿಸ್ತ ನಮ್ಮೊಂದಿಗೆ ಮಾತನಾಡುತ್ತಿರುವುದರ ಧ್ವನಿಯು ಕೇಳಿಸುತ್ತಿದೆ:

**"ನೀವು ಲೋಕಕ್ಕೆ ಬೆಳಕಾಗಿದ್ದೀರಿ, ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ. ದ್ವೀಪಸ್ತಂಭದ ಮೇಲೆ ಇಡುತ್ತಾರಷ್ಟೇ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕುಕೊಡುವದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು"** (ಮತ್ತಾಯ 5:14–16).

**ನಾವು ಹೇಗೆ ಜೀವನಮಾಡಬೇಕು ಮತ್ತು ಕ್ರೈಸ್ತರಾಗಿ ನಾವೇನು ಮಾಡುತ್ತೇವೋ ಅದು ಬೇರೆಯವರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಮೇಲಿನ ವಾಕ್ಯಗಳು ಹೇಳುವುದೇನು?**

________________________________________

________________________________________

ಗಲಿಲಾಯ ಸಮುದ್ರದ ಬಳಿಯಲ್ಲಿ, ಉರಿ ಬಿಸಿಲಲ್ಲಿ ಕುಳಿತ ಜನಸಮೂಹ ಯೇಸುಕ್ರಿಸ್ತನ ಮಾತುಗಳನ್ನು ಕೇಳಿಸಿಕೊಳ್ಳುತ್ತಿತ್ತು. ಆದರೆ ಆತನ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತಿತ್ತೇ? ಈತನ ಮಾತುಗಳನ್ನು ಕೇಳಿಸಿಕೊಂಡವರಿಗೆ ಬೆಳಕು ಮತ್ತು ಕತ್ತಲೆಯ ಬಗ್ಗೆ ಗೊತ್ತಿತ್ತು. ಅವರಲ್ಲಿ ಕತ್ತಲೆ ಬಹಳವಾಗಿದ್ದರಿಂದ, ಅವರು ಬಹಳವಾಗಿ ಹೆದರುತ್ತಿದ್ದರು. ಅವರ ನೆಲ ರೋಮನ್ನರ ಪಾಲಾಗಿತ್ತು. ರೋಮನ್ನರು ಅವರನ್ನು ಆಳುತ್ತಿದ್ದರು. ಆಳುವವರಿಗೆ ಸೈನ್ಯದ ಬೆಂಬಲವಿತ್ತು. ಆ ಸೈನ್ಯಕ್ಕೆ,

ಇಂದಿನ ಸೈನಿಕರಿಗೆ ಇರುವಂತೆ ಟೆಲಿಫೋನ್, ಕಂಪ್ಯೂಟರ್, ವೆಬ್‌ಸೈಟ್ ಸೌಕಾರ್ಯವಿರಲಿಲ್ಲ. ಆದರೆ ನಮ್ಮ ಸೈನ್ಯದಷ್ಟೇ ಕಾರ್ಯಸಾಧಕರು, ಭಯಹುಟ್ಟಿಸುವವರಂತಿದ್ದರು.

ರೋಮನ್ನರು ಎಲ್ಲೆಡೆ ಇದ್ದರು. ಇಸ್ರಾಯೇಲ್ಯರಲ್ಲಿ ಯಾರಾದರೂ ತೊಂದರೆ ಉಂಟುಮಾಡುವ ಮನಸ್ಸು ಮಾಡಿದರೆ ಅವರನ್ನು ತಕ್ಷಣ ಚಿತ್ರಹಿಂಸೆ ಕೊಡುವ ಮತ್ತು ರೋಮನ್ನರ ಶಿಲುಬೆಯ ಮೇಲಿನ ಸಾವನ್ನು ನೆನಪಿಸುವುದಕ್ಕೋಸ್ಕರ ಈ ಸೈನ್ಯ ತಪ್ಪಲಿನಲ್ಲಿ ತಂಗಿತ್ತು.

ಇಷ್ಟೆಲ್ಲ ಇದ್ದರೂ, ಇಲ್ಲಿ ಯೇಸುಸ್ವಾಮಿ, ಅವರೆಲ್ಲರಿಗೆ– ನೀವು ಲೋಕಕ್ಕೆ ಬೆಳಕಾಗಿರಬೇಕೆಂದು ಕರೆಕೊಡುತ್ತಾನೆ. ಅವರು ಕರುಣೆಯುಳ್ಳವರು, ನಿರ್ಮಲಚಿತ್ತರು, ಸಮಾಧಾನ ಪಡಿಸುವವರೂ ಆಗಿರಬೇಕು ಎನ್ನುತ್ತಾನೆ. ಕ್ರೈಸ್ತೀಯ ಶಿಕ್ಷಣ, ನಮ್ಮ ವಿದ್ಯಾರ್ಥಿಗಳಿಗೆ ಈ ಪ್ರಪಂಚಕ್ಕೆ ಅವರು ಬೆಳಕಾಗಿರಬೇಕು ಎಂಬ ಪಥ್ಯವಸ್ತುವನ್ನು ತನ್ನಲ್ಲಿ ಅಳವಡಿಸಿಕೊಳ್ಳಬೇಕು. ಅವರು ತೆಗೆದುಕೊಳ್ಳುವ ಆಯ್ಕೆಗಳು ಮತ್ತು ತೀರ್ಮಾನಗಳು ಬೇರೆಯವರಿಗೆ ದೇವರ ವಾಸ್ತವತೆಯನ್ನು ಮತ್ತು ಒಳ್ಳೇಯತನವನ್ನು ತೊಡಗಿಸಿಕೊಡುವಂತಹ ಶಿಕ್ಷಣವನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಡಬೇಕು.

**ಬೇರೆಯವರ ಗಮನವನ್ನು ದೇವರ ವಾಸ್ತವತೆ ಮತ್ತು ಒಳ್ಳೇತನದೆಡೆಗೆ ಸೆಳೆಯಲು ಇರುವ ಮಾರ್ಗಗಳಾವುವು?**

**ಮಂಗಳವಾರ** **ನವೆಂಬರ್ 24**

## ಶಿಷ್ಯರಂತೆ ಜೀವಿಸುವುದು

ಕ್ರೈಸ್ತೀಯ ಶಿಕ್ಷಣಕ್ಕೆ, ಸಭೆಯು ಬಲವಾದ ಶಕ್ತಿಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದರೆ, ಅದು ಕ್ರಿಸ್ತನಿಂದಲೇ ಆರಂಭವಾಗಲಿ, ಯೇಸುಕ್ರಿಸ್ತನು ಶಿಷ್ಯರಿಗೆ ಕರೆಕೊಟ್ಟಿದ್ದನು. ಅವರೊಂದಿಗೆ ಒಡನಾಡಿ ಅವರನ್ನು ದೇವರ ಸೇವೆಗೆ ತರಬೇತಿ ಕೊಟ್ಟನು. ಯಾವ ಜನರಿಗೆ ಆರೈಕೆಯ ಅವಶ್ಯವಿತ್ತು ಮತ್ತು ಯಾವ ಜನರಿಗೆ ಪ್ರೀತಿಯ ಅವಶ್ಯವಿತ್ತೋ ಆ ಜನರ ಸೇವೆಮಾಡಲು ತನ್ನ ವಿದ್ಯಾರ್ಥಿಗಳಿಗೆ ಒಂದು ಸದಾವಕಾಶ ಕಲ್ಪಿಸಿಕೊಟ್ಟನು. ಈ ಲೋಕದಲ್ಲಿರುವ ಜನರು

ಒಬ್ಬರನ್ನೊಬ್ಬರು ಸಹೋದರ–ಸಹೋದರಿಯರಂತೆ ಯಾವಾಗ ನಡೆಸಿಕೊಳ್ಳಲು ಆರಂಭಿಸುತ್ತಾರೋ, ಆಗ, ಈ ಪ್ರಪಂಚವೇ ಹೇಗಾಗುತ್ತದೆ ಎಂಬ ತನ್ನ ದರ್ಶನವನ್ನು, ಯೇಸು, ಅವರ ಮುಂದೆ ಸವಾಲಾಗಿಟ್ಟನು.

**ಲೂಕ 4:18–23ನ್ನು ಓದಿಕೊಳ್ಳಿರಿ. ಕ್ರಿಸ್ತನ ಹಿಂಬಾಲಕರಾದ ನಮಗೆ ಇಲ್ಲಿ ಕ್ರಿಸ್ತನು ಕೊಟ್ಟಿರುವ ಸಂದೇಶವೇನು?**

________________________________________

________________________________________

ನಾವೇನಾದರೂ ಒಂದು ಪಾಠ ಕಲಿಯಬೇಕು ಎನ್ನುವುದಾದರೆ, ಅದು ಶಿಷ್ಯತ್ವ. ಈ ಪಾಠವನ್ನು ನಾವು ಅಲಕ್ಷಿಸಬಾರದು. ನಾವು ಒಂದು ದಿನದ ಶಿಷ್ಯರಲ್ಲ, ನಾವು ಜೀವಮಾನದಲ್ಲೆಲ್ಲ ಆತನ ಶಿಷ್ಯರಾಗಿದ್ದೇವೆ.

"ಶಿಷ್ಯರಿಗೆ ಕರ್ತನು ಕೊಟ್ಟ ಕರೆಯು.... ಎಲ್ಲಾ ವಿಶ್ವಾಸಿಗಳಿಗೂ ಅಂತ್ಯ ಕಾಲದವರೆಗೂ ಕೊಡಲಾದ ಕರೆಯಾಗಿದೆ.... ಯಾರೆಲ್ಲರಿಗೆ ಪರಲೋಕದಿಂದ–ಸ್ಫೂರ್ತಿ ಪ್ರಾಪ್ತವಾಯಿತೋ ಅವರೆಲ್ಲರೂ ಸುವಾರ್ತೆಯಲ್ಲಿ ಭರವಸೆಯಿಡುತ್ತಾರೆ. ಯಾರ್ಯಾರು ಕ್ರಿಸ್ತನ ಜೀವನವನ್ನು ಸ್ವೀಕಾರ ಮಾಡಿಕೊಳ್ಳುತ್ತಾರೋ ಅವರೆಲ್ಲ, ತಮ್ಮ ಸಹೋದರ ಸಹೋದರಿಯರ ರಕ್ಷಣೆಗಾಗಿ ತಮ್ಮನ್ನು ಪ್ರತಿಷ್ಠೆ ಮಾಡಿಕೊಳ್ಳುವರು. ಈ ಕಾರ್ಯಕ್ಕಾಗಿಯೇ ಸಭೆ ಸಂಸ್ಥಾಪಿಸಲ್ಪಟ್ಟಿತು. ರಕ್ಷಣೆಯ ಕೆಲಸ ಮಾಡುವವರಾಗಿ, ಯಾರು ಪವಿತ್ರ ಪ್ರತಿಜ್ಞೆ ಮಾಡುತ್ತಾರೋ, ಅವರು ಕ್ರಿಸ್ತನ ಜೊತೆಗೆಲಸಗಾರರಾಗಲು ಮಾತುಕೊಡುವವರಾಗಿದ್ದಾರೆ" – ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 822.

ಕ್ರಿಸ್ತನ ಶಿಷ್ಯರಾಗಿ, ನಾವು ಒಂದು ವಿಷಯವನ್ನು ಖಚಿತಪಡಿಸಿಕೊಳ್ಳಬೇಕು. ಅದೇನೆಂದರೆ: ನಮ್ಮ ಸಹೋದರ–ಸಹೋದರಿಯೊಂದಿಗಿನ ಒಡನಾಡಿತನ ಮತ್ತು ನಮ್ಮ ಆರಾಧನೆಯ ಕೇಂದ್ರಬಿಂದು ಯೇಸುಸ್ವಾಮಿಯೇ ಆಗಿರಲಿ. ಯೇಸುಸ್ವಾಮಿ ಸ್ವತಃ ತಾನೇ ಈ ಶಿಷ್ಯತ್ವವನ್ನು ಅನ್ವೇಷಣೆ ಮಾಡಿದ್ದರಿಂದ ಅದನ್ನು ನೆನಸಿ ನೋಡುವುದು ಒಳ್ಳೆಯದೇ. ಕ್ರಿಸ್ತನ ಕಾಲದ ರಬ್ಬಿಗಳೂ ತಮ್ಮ ಹಿಂಬಾಲಕರನ್ನು ಆಕರ್ಷಣೆ ಮಾಡಿದ್ದರೂ, ಒಳ್ಳೆಯದೇ. ಕ್ರಿಸ್ತನ ಕಾಲದ ರಬ್ಬಿಗಳೂ ತಮ್ಮ

ಹಿಂಬಾಲಕರನ್ನು ಆಕರ್ಷಣೆ ಮಾಡಿದ್ದರೂ, ಕ್ರಿಸ್ತನು ಮಾತ್ರ ಪುರುಷರನ್ನೂ ಮತ್ತು ಸ್ತ್ರೀಯರನ್ನೂ ತನ್ನನ್ನು ಹಿಂಬಾಲಿಸುವಂತೆ ಕರೆ ನೀಡಿದ್ದಾನೆ. ಕ್ರಿಸ್ತನಿಂದ ಕೊಡಲ್ಪಟ್ಟ ಆ ಕರೆ ಸುಧಾರಣೆ ತರುತ್ತದೆ ಎಂದು ರಬ್ಬಿಗಳು ಕಲ್ಪನೆ ಮಾಡಿ ಕೂಡ ನೋಡಲಾಗಿರಲಿಲ್ಲ. ಯೇಸುವಿನೊಂದಿಗಿರುವುದು, ಬೇರೆಲ್ಲ ಆಜ್ಞೆಗಳಿಗಿಂತ ಬಹುಮುಖ್ಯ.

ಕ್ರಿಸ್ತನ ಶಿಷ್ಯರಾದ ನಾವು ಎಲ್ಲಾ ಜನರನ್ನು ಗೌರವದಿಂದ ಕಂಡರೆ ಮಾತ್ರ ಸಾಲದು, ಆದರೆ ಎಲ್ಲಾ ಜನರು ಕ್ರಿಸ್ತನಲ್ಲಿ ಬೆಳೆಯುವಂತಹ ಮತ್ತು ಆಧ್ಯಾತ್ಮಿಕವಾಗಿ ಅಭಿವೃದ್ಧಿಯಾಗುವಂತಹ ಸ್ಥಳವನ್ನೂ ಅವರಿಗೆ ಒದಗಿಸಬೇಕು.

ಆದ್ದರಿಂದಲೇ ಕ್ರೈಸ್ತೀಯ ಶಿಕ್ಷಣ ದೇವರ ಸೇವೆಯ ಈ ಜ್ಞಾನವನ್ನು ತನ್ನಲ್ಲಿ ಅಳವಡಿಸಿಕೊಂಡಿರಬೇಕು. ಕೇವಲ ಹೊಟ್ಟೆಬಟ್ಟೆಗಾಗಿ ದುಡಿದರೆ ಸಾಲದು. ಆದರೆ ಯೇಸು ನಮಗೆ ಏನನ್ನು ಮಾಡಲು ಹೇಳಿದ್ದಾನೋ, ಅದನ್ನು ಮಾಡಲು ಸಿದ್ಧರಿರಬೇಕು. ಆತನ ಹೆಜ್ಜೆಯ ಜಾಡಿನಲ್ಲಿ ನಡೆದು ಯಾರ್‍ಯಾರು ಸಹಾಯ ಯಾಚನೆ ಮಾಡುತ್ತಿರುವರೋ ಅವರಿಗೆಲ್ಲ ಸಹಾಯ ಮಾಡಬೇಕು. ಇವರೆಲ್ಲರೊಂದಿಗೆ ಸುವಾರ್ತೆಯ ಸುಸುದ್ದಿಯನ್ನು ಹಂಚಿಕೊಳ್ಳಬೇಕು.

**ಬುಧವಾರ** **ನವೆಂಬರ್ 25**

## ಸತ್ಯದ ಶೋಧ

ಆಲಬರ್ಟ್ ಐನ್‌ಸ್ಟೀನ್‌ರವರನ್ನು ಆಧುನಿಕ ಭೌತಶಾಸ್ತ್ರದ ಜನಕ ಎಂದೇ ಪರಿಗಣಿಸಲಾಗಿದೆ. ಅವರು– "ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದು ಮುಖ್ಯವಲ್ಲ. ಕುತೂಹಲ ಇರುವಿಕೆಗೆ ತನ್ನದೇ ಆದ ಕಾರಣವಿದೆ. ಜೀವನದ, ನಿತ್ಯತೆಯ ವಿಸ್ಮಯಗಳ ಕುರಿತು ಧ್ಯಾನ ಮಾಡಿದಾಗ ಯಾರಿಗೇ ಆಗಲಿ ಭಯ–ಭೀತಿ ಆಗದಿರದು. ಯಾಕೆಂದರೆ ವಾಸ್ತವತೆಯ ರಚನೆಯೇ ಅಷ್ಟೊಂದು ಅಸಾಧಾರಣ. ಈ ವಿಸ್ಮತೆಯನು ಪ್ರತಿದಿನ ಸ್ವಲ್ಪಸ್ವಲ್ಪ ಗ್ರಹಿಸಿದರೂ ಅಷ್ಟೇ ಸಾಕು. ಒಂದು ಪವಿತ್ರವಾದ ಕುತೂಹಲತೆಯನ್ನು ಎಂದೂ ಕಳೆದುಕೊಳ್ಳಬೇಡಿ".

ಹೆಚ್ಚು ಕಡಿಮೆ ನಮ್ಮ ಹಾಗೆಯೇ, ಪ್ರಶ್ನೆ ಕೇಳುವ ಸ್ತ್ರೀ–ಪುರುಷರು, ಹೆದರಿಕೆ, ನಿರೀಕ್ಷೆಗಳು ಮತ್ತು ಸಂತೋಷದಿಂದಿರುವ ಜನ, ತಮ್ಮದೇ ಆದ ರೀತಿಯಲ್ಲಿ ಸತ್ಯದ ಶೋಧದಲ್ಲಿರುವ ಹಾಗು ಜೀವನದ ಅತ್ಯಂತ ಜಟಿಲವಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಜನರ, ಕುತೂಹಲ ಜನರ ಕಥೆಗಳಿಂದ ತುಂಬಿದೆ ಸತ್ಯವೇದ.

"ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ; ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ. ಆದರೂ ದೇವರು ಆದ್ಯಂತವಾಗಿ ನಡೆಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ." (ಪ್ರಸಂಗಿ 3:11).

ಸೊಲೊಮೋನನ ಈ ಮಾತಿನ ಅರ್ಥವೇನು? ಮೂಲದ ಇಬ್ರಿಯ ಭಾಷೆಯ ಈ ವಾರದಲ್ಲಿ ನಿತ್ಯತ್ವಕ್ಕೆ "ಒಲಮ್" ಎಂಬ ಪದ ಬಳಕೆಯಾಗಿದೆ. ಕೆಲವು ವ್ಯಾಖ್ಯಾನಕಾರರು ಈ ಪದವನ್ನು "ಭೂತ ಮತ್ತು ಭವಿಷ್ಯದ ಇಂದ್ರಿಯ ಜ್ಞಾನ" ಎಂದು ಭಾಷಾಂತರಿಸಿದ್ದಾರೆ. ಈ ಅರ್ಥದಲ್ಲಿ, ಮೇಲಿನ ವಾಕ್ಯವನ್ನು ದೇವರು ಮಾನವರ ಹೃದಯದಲ್ಲಿಯೂ ಮತ್ತು ಮನಸ್ಸಿನಲ್ಲಿಯೂ ಭೂತ ಮತ್ತು ಭವಿಷ್ಯ ಕುರಿತ ಇಂದ್ರಿಯ ಜ್ಞಾನವನ್ನಿಟ್ಟಿದ್ದಾನೆ. ನಿತ್ಯತ್ವನ್ನೇ ಅಂತರಂಗದಲ್ಲಿಟ್ಟಿದ್ದಾನೆ ಎಂದು ಅರ್ಥೈಸಿಕೊಳ್ಳಬಹುದು. ಮಾನವರಾದ ನಾವು, ಜೀವ ಮತ್ತು ನಮ್ಮ ಅಸ್ತಿತ್ವ ಕುರಿತ "ದೊಡ್ಡ ಪ್ರಶ್ನೆಗಳನ್ನು" ಕುರಿತು ಚಿಂತನೆ ನಡೆಸಬಹುದಾಗಿದೆ.

ಇಲ್ಲಿ ತಾನೇ ಸತ್ಯವೇದ ಕೇಂದ್ರ ಪಾತ್ರ ವಹಿಸಿದೆ. ನಾವು ಯಾರು? ನಾವೇಕೆ ಇಲ್ಲಿದ್ದೇವೆ? ನಾವು ಹೇಗೆ ಇಲ್ಲಿ ಬದುಕಬೇಕು? ನಾವು ಸತ್ತಾಗ ಏನಾಗುತ್ತದೆ? ದುಷ್ಟತನ ಮತ್ತು ಸಂಕಟ ಇಲ್ಲಿ ಏಕಿದೆ? ಇತಿಹಾಸ ಬರೆಯಲಿಕ್ಕೆ ಆರಂಭವಾದ ಕಾಲದಿಂದ ಸತ್ಯದ ಶೋಧದಲ್ಲಿರುವವರು ಕೇಳುತ್ತಲೇ ಬಂದಿದ್ದಾರೆ. ಇಂತಹ ಶೋಧದಲ್ಲಿರುವವರು ಉತ್ತರವನ್ನು ಕಂಡುಕೊಳ್ಳಲು ಎಂತಹ ಸಹಾಯ ಮಾಡುವ ಸದಾವಕಾಶ ನಮಗೆ ಒದಗಿ ಬಂದಿದೆ ಹಾಗೂ ಎಂತಹ ಗುರುತರವಾದ ಜವಾಬ್ದಾರಿ ನಮ್ಮ ಮೇಲಿವೆ. ದೇವರ ವಾಕ್ಯದಿಂದ, ಮೇಲಿನ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದಿದ್ದರೆ, ಕ್ರೈಸ್ತೀಯ ಶಿಕ್ಷಣ ಏಕೆ?

ಜೀವನದ ದೊಡ್ಡ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಸತ್ಯವೇದ ಮುಖ್ಯಪಾತ್ರ ವಹಿಸಬೇಕೇಕೆ?

**ಗುರುವಾರ** **ನವೆಂಬರ್ 26**

## ನಮ್ಮ ಜೀವನಗಳನ್ನು ಹಂಚಿಕೊಳ್ಳುವುದು

**1 ಥೆಸ 2:6–8ನ್ನು ಓದಿಕೊಳ್ಳಿರಿ. ನಮ್ಮ ಶಾಲೆಗಳ ಮತ್ತು ಸಭೆಗಳ ವಿಷಯದಲ್ಲಿ ನಮ್ಮ ಚಿಂತನೆಗಳೇನಾಗಿರಬೇಕೆಂದು ಇಲ್ಲಿ ಪೌಲ ಹೇಳಿರುವುದೇನು?**

________________________________________

________________________________________

ಸಮಾಜದಲ್ಲಿ ಕುಸಿಯುತ್ತಿರುವ ಸಮುದಾಯವನ್ನು ಎದುರಿಸುತ್ತಿದ್ದರೂ ಸಭೆಯ, ಸತ್ಯವೇದಾಧಾರಿತ ಅರ್ಥಗ್ರಹಿಕೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿರುವ ಕಾಲ ಘಟ್ಟದಲ್ಲಿ ನಾವು ಜೀವಿಸುತ್ತಿದ್ದೇವೆ. ಮತ್ತಾಯ 18:20 ಹೀಗೆ ಜ್ಞಾಪಕ ಮಾಡಿಕೊಡುತ್ತಿದೆ. "ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ" ಹೊಸ ಒಡಂಬಡಿಕೆಯ ಸಭೆ ಮತ್ತು ಸಮುದಾಯದ ಪರಿಕಲ್ಪನೆ ಬಂದಿರುವುದೇ ಪ್ರಾಥಮಿಕವಾಗಿ ವಿಶ್ವಾಸಿಗಳ ಮನೆಗಳಲ್ಲಿ ಪಡೆದುಕೊಂಡ ಆಕಾಶದಿಂದ ಸಮುದಾಯದ ಸಣ್ಣ ಸಣ್ಣ ಗುಂಪುಗಳು ಮನೆಗಳಲ್ಲಿ ಗುಂಪುಕೂಡಿ ಪ್ರಾರ್ಥನೆ ಮಾಡುವ, ಹಾಡುವ, ಕರ್ತನ ರಾತ್ರಿ ಭೋಜನ ಆಚರಿಸುವ, ಕ್ರಿಸ್ತನ ವಾಕ್ಯಗಳನ್ನು ಕಲಿಯುವ ಮತ್ತು ಒಬ್ಬರಿನ್ನೊಬ್ಬನೊಂದಿಗೆ ಹಂಚುವ ಕೆಲಸಗಳನ್ನು ಮಾಡುತ್ತಿದ್ದರು.

ದೇವಾರಾಧನೆ ಮಾಡುತ್ತಿದ್ದ ಈ ಗುಂಪುಗಳು ಮೊದಲ ಸಭಾ–ಶಾಲೆಗಳಾದವು. ಹೊಸದಾಗಿ ಸಭೆಗೆ ಸೇರುತ್ತಿದ್ದವರಿಗೆ ಸತ್ಯವೇದದ ಪರಿಚಯು ಮಾಡಿಕೊಡಲಾಗುತ್ತಿತ್ತು. ಅವರು ಕ್ರಿಸ್ತನಲ್ಲಿ ಹೊಸ ಜೀವನಗಳನ್ನು ಕಂಡುಕೊಳ್ಳುತ್ತಿದ್ದರು. ಪೌಲನ– "**ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕದ ಭಾವದವರಾಗಿರಿ**" (ರೋಮ 12:2) ಎಂಬ ಮಾತು ಸಭೆಯು ಶಿಕ್ಷಣದ ಕೆಲಸವನ್ನು ಬಹಳ ಗಂಭೀರವಾಗಿ ಪರಿಗಣಿಸಿತೆಂಬ ಸೂಚನೆ ಕೊಡುತ್ತದೆ.

ಸಮುದಾಯಗಳಲ್ಲಿ, ಸುವಾರ್ತೆ ಉತ್ತಮವಾದ ರೀತಿಯಲ್ಲಿ ಜೀವಿಸುತ್ತದೆ ಎಂಬುದನ್ನು ಆದಿಸಭೆಯ ವಿಶ್ವಾಸಿಗಳು ಕಂಡುಕೊಂಡರು. ಸಮುದಾಯದಲ್ಲಿ ನಾವು ಜೋರಾಗಿ ಹಾಡಬಹುದು. ಭಕ್ತಿಯಿಂದ ಪ್ರಾರ್ಥನೆ ಮಾಡಬಹುದು ಮತ್ತು ಹೆಚ್ಚು ಆರೈಕೆ ಮಾಡಬಹುದು ಹಾಗು ಅನುಕಂಪ ತೋರಬಹುದು. ದೇವರ ಒಳ್ಳೇಯತನವನ್ನು ಬೇರೆಯವರು ಮಾತಾಡುವುದನ್ನು ನಾವು ಕೇಳಿಸಿಕೊಂಡಾಗ, ಆತನು ನಮಗೂ ಎಷ್ಟು ಒಳ್ಳೆಯವನಾಗಿದ್ದನು ಎಂಬುದನ್ನು ನೆನೆಸುತ್ತೇವೆ; ಒಬ್ಬರಿನ್ನೊಬ್ಬರೊಂದಿಗೆ ಮಾಡಿಕೊಳ್ಳುವ ಘರ್ಷಣೆಗಳು ಹಾಗು ಮನಸ್ಸಿಗಾಗುವ ಗಾಯಗಳನ್ನು ಕುರಿತು ಹೇಳಿದಾಗ, ನಮ್ಮ ಜೀವನದಲ್ಲಿ ಆತನು ಮಾಡಿದ ರೋಗಗುಣಪಡಿಸುವಿಕೆಯನ್ನೂ ನೆನಸಿಕೊಳ್ಳುತ್ತೇವೆ. ಆತನ ಕೃಪೆ ಮತ್ತು ಆತನ ಗುಣಪಡಿಸುವಿಕೆಯ ಸಾಧನಗಳಾಗಿ ನಾವು ಹೊಸಹೊಸ ಅನುಭವಗಳನ್ನು ಪಡೆಯುವ ಬಯಕೆಗಳನ್ನು ಹೊಂದುತ್ತೇವೆ.

ಇಂದಿನ ಮೇಲಿನ ಸತ್ಯವೇದ ಉಲ್ಲೇಖದಲ್ಲಿ: ಶಿಲುಬೆಯ ಬಲ, ಕರ್ತನಾದ ದೇವರ ಪುನರುತ್ಥಾನ, ಮತ್ತೆ ಆತನ ಹಿಂತಿರುಗಿ ಬರುವಿಕೆಯ ವಾಗ್ದಾನವೇ ದೇವರ ಸುವಾರ್ತೆಯೆಂದು ಪೌಲ ಖಡಾಖಂಡಿತವಾಗಿ ಹೇಳಿದ್ದಾನೆ. ಇಡೀ ಪ್ರಪಂಚದಲ್ಲಿ ಇದಕ್ಕಿಂತ ಉತ್ತಮವಾದ ಸುಸುದ್ದಿ ಮತ್ತೊಂದಿಲ್ಲ. ಪೌಲನು, ತನ್ನ ಜೀವಮಾನ ಕಾಲವನ್ನೆಲ್ಲ, ಶ್ರೇಷ್ಠವಾದ ಸಮಗ್ರತೆ ಮತ್ತು ವಚನಬದ್ಧತೆಯಿಂದ ಕ್ರಿಸ್ತನ ಕಥೆಯನ್ನು ಹೇಳುವುದಕ್ಕೆ ಆದ್ಯತೆ ಕೊಟ್ಟಿದ್ದನು. ಇದಕ್ಕೆ ಬಂದ ಅಡ್ಡಿಗಳನ್ನು ಸುಮ್ಮನೆ ಪಕ್ಕಕ್ಕೆ ತಳ್ಳಿ, ತನ್ನ ಸೇವೆಯನ್ನು ಪ್ರಾಮಾಣಿಕವಾದ ಸೇವೆಯನ್ನು ಮುಂದುವರಿಸಿದ್ದನು.

ಹೀಗೆ ನಡೆದುಕೊಂಡ ಪೌಲನ ಅತ್ಯುತ್ತಮ ಸಲಹೆ: ನಮ್ಮ ಜೀವನವನ್ನು ಒಟ್ಟಾಗಿ ಹಂಚಿಕೊಳ್ಳುವ ಮೂಲಕ ಸುವಾರ್ತೆಯ ಸಂದೇಶವನ್ನು ಅತ್ಯುತ್ತಮವಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಅತ್ಯುತ್ತಮವಾಗಿ ಅನುಭವಿಸಬಹುದು. ಸತ್ಯವೇದದಲ್ಲಿ ನಾವು ಕಂಡುಕೊಳ್ಳುವ ಕೃಪೆಯ ಸಂದೇಶಕ್ಕೆ ನಮ್ಮ ಜೀವನ ದೃಷ್ಟಾಂತವಾಗಿದೆಯೇ ಎಂಬುದನ್ನು ಜನ ಅತ್ಯಂತ ಸಮೀಪದಿಂದ ನಮ್ಮನ್ನು ಅವಲೋಕಿಸುತ್ತಿದ್ದಾರೆ ಎಂಬುದನ್ನು ನಾವೆಂದೂ ಮರೆಯಬಾರದು.

**ನೀವು ಹೇಗೆ ಜೀವನ ಸಾಗಿಸುತ್ತಿದ್ದೀರಿ ಮತ್ತು ನನ್ನ ಸುತ್ತಮುತ್ತ ಇರುವವರಿಗೆ ನಾನು ಎಂತಹ ಸಾಕ್ಷಿಕೊಡುತ್ತಿದ್ದೇನೆ ಎಂದು ನಿಮಗೆ ನೀವೇ ಕೇಳಿಕೊಳ್ಳುವಿರಾ?**

---

---

**ಶುಕ್ರವಾರ** **ನವೆಂಬರ್ 27**

**ಹೆಚ್ಚಿನ ಚಿಂತನೆ :** ಪ್ರಾಪಂಚಿಕ ಪ್ರಾಧಾನ್ಯತೆಯಲ್ಲಿ ನಿರೀಕ್ಷೆ ಇಡುವುದು ಬೇಡ ಎಂದು ಕ್ರಿಸ್ತನು ಹೇಳಿದ್ದಾನೆ. ಪರ್ವತ ಪ್ರಸಂಗದಲ್ಲಿ ಆತನು ತಪ್ಪಾದ ಶಿಕ್ಷಣದಿಂದ ಬಂದ ಫಲಿತಾಂಶಗಳನ್ನು ಖಂಡಿಸಿದ್ದನು. ತನ್ನ ಶ್ರೋತೃಗಳಿಗೆ ಆತ ತನ್ನ ರಾಜ್ಯ ಮತ್ತು ತನ್ನ ಚಾರಿತ್ರ್ಯ ಕುರಿತು ಸರಿಯಾದ ಪರಿಕಲ್ಪನೆಯನ್ನು ಕೊಟ್ಟಿದ್ದನು. ಇಷ್ಟಾದರೂ ಆತ ಜನರ ತಪ್ಪುಗಳ ವಿರುದ್ಧ ನೇರವಾದ ಆಕ್ರಮಣ ಮಾಡಲಿಲ್ಲ. ಪ್ರಪಂಚ ತನ್ನ ಪಾಪದ ದಶೆಯಿಂದ ಎಂತಹ ವಿಪತ್ತಿಗೆ ಒಳಗಾಗಿದೆ ಎಂಬುದನ್ನು ಕಂಡುಕೊಂಡನು. ಆದರೆ ಅದರ ಕೆಟ್ಟತನದ ವಿರುದ್ಧ ಯಾವುದೇ ಉಜ್ವಲ ವರ್ಣನೆ ನೀಡುವುದಕ್ಕೆ ಹೊಗಲಿಲ್ಲ. ಅವರಿಗೇನು ಗೊತ್ತಿತ್ತೋ ಅದಕ್ಕಿಂತ ಅಪರಿಮಿತ ಅಮೂಲ್ಯವಾದವುಗಳನ್ನು ಅವರಿಗೆ ತಿಳಿಸಿಕೊಟ್ಟನು. ಅವರಿಗಿದ್ದ ದೇವರ ರಾಜ್ಯ ಕುರಿತ ಕಲ್ಪನೆಗಳನ್ನು ವಿರೋಧಿಸದೆ, ಆತನ ರಾಜ್ಯಕ್ಕೆ ಪ್ರವೇಶಿಸ ಬೇಕಾದರೆ ಇರುವ ಕರಾರುಗಳೇನು ಎಂಬುದನ್ನು ತಿಳಿಸಿಕೊಟ್ಟನು. ತೀರ್ಮಾನ ತೆಗೆದುಕೊಳ್ಳುವುದನ್ನು ಅವರಿಗೆ ಬಿಟ್ಟುಕೊಟ್ಟನು. ಅಂದು ಆ ಜನಸಮೂಹಕ್ಕೆ ಯಾವ ಸತ್ಯಗಳನ್ನು ಅಂದು ಹಂಚಿಕೊಂಡನೋ ಅವು ನಮಗಿಂದೂ ಸಹ ಕಡಿಮೆ ಪ್ರಾಮುಖ್ಯತೆಯದೇನೂ ಅಲ್ಲ. ದೇವರ ರಾಜ್ಯದ ಮೂಲಭೂತ ತತ್ವಗಳನ್ನು ಕಲಿಯಬೇಕಾದ ಅವಶ್ಯಕತೆ ಅವರಿಗೆಷ್ಟಿತ್ತೋ, ನಮಗೂ ಸಹ ಅಷ್ಟೇ ಇದೆ" – ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 299.

## ಚರ್ಚಿಸಬೇಕಾದ ಪ್ರಶ್ನೆಗಳು

1. ರಾಬರ್ಟ್ ಲೂಯಿಸ್ ಸ್ಟಿವನ್‌ಸನ್ ಸ್ಕಾಟ್‌ಲೆಂಡ್‌ನ, ಎಲೆನ್‌ಬರ್ಗ್‌ನಲ್ಲಿ ಕ್ರಿ.ಶ. 1850ರಲ್ಲಿ ಜನಿಸಿದ್ದ. ಒಂದು ರಾತ್ರಿ ಅವನ ಅಜ್ಜಿ, ಅವನು ಮಲಗಿಕೊಳ್ಳಲು ಹಾಸಿಗೆ ಸಿದ್ಧಪಡಿಸುತ್ತಿದ್ದಳು. ಆಗ ಸ್ಟಿವ್‌ಸನ್ ಕಿಟಕಿಯಿಂದ ಹೊರಗೆ ನೋಡುತ್ತಾ ನಿಂತಿದ್ದ. ಆಗ ಅವನ ಕಣ್ಣಿಗೆ ಸುಂದರವಾದ

ದೃಶ್ಯ ಬಿತ್ತು. ಹೊರಗೊಬ್ಬ ಮನುಷ್ಯ ದಾರಿದೀಪಗಳನ್ನು ಒಂದೊಂದಾಗಿ ಹತ್ತಿಸುತ್ತಾ ಹೊರಟಿದ್ದ. ಆಗ ಅವನು ತನ್ನ ಅಜ್ಜಿಯನ್ನು ತನ್ನ ಬಳಿಗೆ ಕರೆದು, ಹೊರಗೆ ತಾನು ಕಂಡ ದೃಶ್ಯವನ್ನು, ಅಜ್ಜಿಗೆ ಬಾಲಚೇಷ್ಟೆಯಿಂದ ಹೀಗೆ ನುಡಿದಿದ್ದ– "ಅಜ್ಜಿ! ಆ ಮನುಷ್ಯನ ನೋಡು! ಅವನು ಕತ್ತಲೆಯಲ್ಲಿ ಗುಳಿ ತೋಡುತ್ತಿದ್ದಾನೆ!" ನಿಮ್ಮ ಸಮುದಾಯಕ್ಕೆ ಬೆಳಕು ಮತ್ತು ಪ್ರೀತಿಯನ್ನು ತರುವುದಕ್ಕೆ ದೇವರು ನಿಮಗೆ ವಹಿಸಿರುವ ಪಾತ್ರವೇನು? ನಿಮಗೆ ಉತ್ತರ ಖಚಿತವಾಗಿ ಗೊತ್ತಿಲ್ಲದಿದ್ದರೆ, ನಿಮ್ಮ ಸಭೆಯ ಕೆಲವು ಸದಸ್ಯರ ಜೊತೆ ಕುಳಿತು ಚರ್ಚೆ ಮಾಡಿರಿ ಮತ್ತು ನೀವೆಲ್ಲ ಒಟ್ಟಾಗಿ ಏನು ಮಾಡಬಹುದು ಎಂಬುದನ್ನು ಕುರಿತು ಚಿಂತನೆ ನಡೆಸಿರಿ.

2. ಪ್ರಪಂಚಕ್ಕೆ ಸುವಾರ್ತೆ ಮುಟ್ಟಿಸಲು ನಾವು ದೇವರೊಂದಿಗೆ ಕೈಜೋಡಿಸ ಬೇಕಾಗಿದೆ. ಆ ಸಲುವಾಗಿ ನಾವು ಕ್ರಿಸ್ತನ ವಾಕ್ಯಗಳನ್ನು ಮತ್ತು ಆತನ ಸೇವೆಯನ್ನು ಅಪ್ಪಿಕೊಳ್ಳಬೇಕಾಗಿದೆ. ಆತ ಮಾನವವಾತಾರದಲ್ಲಿ ದೇವರು ನಮ್ಮ ಬಳಿಗೆ ಇಳಿದು ಬಂದದ್ದು. ಈ ಲೋಕದಲ್ಲಿ ವಾಸಿಸಿದ್ದು, ಹೋರಾಟದ ಬದುಕು ನಡೆಸಿದ್ದು, ನಮ್ಮೊಂದಿಗೆ ನಕ್ಕಿದ್ದು ಮತ್ತು ನಮ್ಮೊಂದಿಗೆ ಅತ್ತಿದ್ದು, ಇವೆಲ್ಲ ನಮ್ಮ ಸುತ್ತಮುತ್ತಲಿರುವವರನ್ನು ಆರೈಕೆ ಮಾಡಲು ನಮಗೆ ಕರೆಕೊಡಲಾಗಿದೆ ಎಂಬುದನ್ನು ನೆನಪಿಸುತ್ತಿದೆ. ನೀವು ಈ ಕೆಲಸವನ್ನು ಮಾಡುವುದು ಹೇಗೆ? ಈ ಕೆಲಸಕ್ಕೆ ನಿಮ್ಮ ಸಭೆಯ ಯುವಜನತೆಯನ್ನು ಹೇಗೆ ಉಪಯೋಗಿಸಿಕೊಳ್ಳುವಿರಿ.

3. ಸೆವೆಂತ್ ಡೇ ಅಡ್ವೆಂಟಿಸ್ಟರುಗಳಾದ ನಮಗೆ, ದೇವರು ಕೊಟ್ಟಿರುವ ಸತ್ಯವನ್ನು ಬೇರೆಯವರಿಗೆ ಕಲಿಸಬೇಕಾದ ಜವಾಬ್ದಾರಿಯಿದೆ ಎಂಬ ವಿಷಯವನ್ನು ಕುರಿತು ಚಿಂತನೆ ನಡೆಸಿರಿ. ಈ ಸತ್ಯಗಳನ್ನು ಬೇರೆಯವರಿಗೆ ಹಂಚುವ ವಿಷಯದಲ್ಲಿ ಸ್ಥಳೀಯ ಸಭೆ ಮುಖ್ಯವಾದ ಪಾತ್ರ ವಹಿಸುವುದು ಹೇಗೆ? ಗಂಭೀರವಾದ ಪ್ರಶ್ನೆಗಳಿಗೆ ಉತ್ತರ ನೀಡಲು ನೀವು ಕಲಿಸಬಹುದಾದ ಸನ್ನಿವೇಶವನ್ನು ಸೃಷ್ಟಿಸಲು ನೀವೇನು ಮಾಡಬಹುದು?

4. ನೀವು ವಾಸ ಮಾಡುತ್ತಿರುವ ಸಮಾಜದಲ್ಲಿರುವ ಸಾಂಸ್ಕೃತಿಕ ಪೂರ್ವಾಗ್ರಹ ಪೀಡಿತ ಸ್ಥಿತಿಗತಿಗಳನ್ನು ಕುರಿತು ನಿಮ್ಮ ತರಗತಿಯಲ್ಲಿ ಮಾತನಾಡಿರಿ. ಧರ್ಮಶಾಸ್ತ್ರದ ಬೋಧನೆಗಳನ್ನು ಆ ಸಮಾಜದವರಿಗೆ ಕಲಿಸುವುದಕ್ಕೆ ಬದಲು, ಅವರು ತಮ್ಮ ಪೂರ್ವಾಗ್ರಹಪೀಡಿತ ಆಲೋಚನೆಗಳಲ್ಲಿ ಬಿಟ್ಟುಕೊಟ್ಟು, ಅದರಿಂದ ಹೊರಬರುವಂತೆ ಮಾಡಲು ನಿಮ್ಮ ಸಭೆ ಯಾವೆಲ್ಲ ಮಾರ್ಗಗಳನ್ನು ನಿಮಗೆ ಬೋಧಿಸಬಹುದು?